ದಿನಾಂಕ 17.02.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಅಜ್ಜನ ತಂದೆಯ ಹೆಸರು ಯಲ್ಲಪ್ಪ ಎಂದರೆ ಸರಿ. ನನ್ನ ತಂದೆಯ ತಂದೆ ಹೆಸರು ನನಗೆ ಗೊತ್ತಿಲ್ಲ. ನಾನು ಈಗ ರಾಣೆಬೆನ್ನೂರಿನ ಚೌಡೇಶ್ವರಿ ನಗರದಲ್ಲಿ ವಾಸವಿರುತ್ತೇನೆ. ಆ ರೀತಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮನೆಯ ಭಾಡಿಗೆಗೆ ನೀಡಿರುವುದಿಲ್ಲ, ಆದರೆ ಭಾಡಿಗೆ ನೀಡಲು ಸೂಕ್ತವಾದಂತೆ ಮನೆ ನಿರ್ಮಿಸಿಕೊಂಡಿರುತ್ತೇವೆ. ಈ ಹಿಂದಿನ ಪಾಟೀ ಸವಾಲಿನಲ್ಲಿ ನಾನು ಒಂದು ಭಾಗವನ್ನು ಭಾಡಿಗೆಗೆ ನೀಡಿರುವುದಾಗಿ ಹೇಳಿರುತ್ತೇನೆ ಎಂದರೆ ಸರಿ. ಸದರಿ ಭಾಡಿಗೆ ಒಬ್ಬ ಮಸ್ಲಿಂ ವ್ಯಕ್ತಿಗೆ ನೀಡಿದ್ದು, ನನ್ನ ತಾಯಿಯ ಮರಣದ ನಂತರ ಸದರಿ ಬಾಡಿಗೆದಾರರನ್ನು ಖಾಲಿ ಮಾಡಿಸಿದ್ದು, ನಂತರ ಪ್ರತಿವಾದಿ ಸದರಿ ಮನೆಯ ಬೀಗ ಒಡೆದು ವಾಸ ಇರುತ್ತಾನೆ. ಈಗ ಸದರಿ ಮನೆಯಲ್ಲಿ ಪ್ರತಿವಾದಿಯು ವಾಸ ಇರುವುದಿಲ್ಲ ಆದರೆ ಆತನ ಅಕ್ಕ ಪಾರ್ವತಿ ವಾಸ ಇರುತ್ತಾರೆ.

**2.** ಸದರಿ ಮುಸ್ಲಿಂ ಭಾಡಿಗೆದಾರನ ಹೆಸರು ನಜೀರ ಎಂದು ಇರುತ್ತದೆ. ಸದರಿ ಭಾಡಿಗೆ ಹಣವನ್ನು ನನ್ನ ತಾಯಿ ಪಡೆದುಕೊಳ್ಳುತ್ತಿದ್ದಳು, ಬಾಡಿಗೆಯು ಪ್ರತಿ ತಿಂಗಳು 2 ಸಾವಿರ ಇತ್ತು. ಈ ದಾವೆ ಹೂಡಿದ ದಿನದಿಂದ ಪಾರ್ವತಿ ದಾವಾ ಸ್ವತ್ತಿನಲ್ಲಿ ವಾಸ ಇರುತ್ತಾಳೆ. ನಾನು ದಿನಾಂಕಃ23.01.2021 ರಂದು ವಿವಾಹವಾಗಿರುತ್ತೇನೆ. ನನ್ನ ತಾಯಿ ವಿವಾಹ ಮಾಡಿಸಿದ್ದು, ಬೇರೆ ಯಾವುದೇ ಸಂಬಂಧಿಗಳು ವಿವಾಹ ಮಾಡಿಸಿರುವುದಿಲ್ಲ. ದಾವಾ ಆಸ್ತಿಯ ಚೆಕ್ಕ ಬಂದಿ ಕೇಳಿದ್ದು ಸಾಕ್ಷಿಯು ವಾದ ಪತ್ರದಲ್ಲಿ ತೋರಿಸಿರುವ ಚೆಕ್ಕ ಬಂದಿಯನ್ನು ನುಡಿದಿರುತ್ತಾರೆ. 2007 ರಲ್ಲಿ ದಾವಾ ಆಸ್ತಿಯು ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಲು ಯಾರು ಅರ್ಜಿ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗಳ ಕುರಿತು ಪೋಲಿಸ ಪಿರ್ಯಾದಿಯನ್ನು ನೀಡಿದ ನಂತರ ಪರೀಶೀಲಿಸಿರುತ್ತೇನೆ. ನಾನು ನನ್ನ ತಾಯಿಯ ಸಹಿಯನ್ನು ತೋರಿಸಿದರೆ ಗುರುತಿಸುತ್ತೇನೆ.

**3.** ನನ್ನ ತಾಯಿಯ ಮರಣದ ನಂತರ ಪ್ರತಿವಾದಿಯ ಹೆಸರಿನಲ್ಲಿ ದಾವಾ ಆಸ್ತಿ ವರ್ಗಾವಣೆಯಾಗಿರುವ ವಿಷಯ ತಿಳಿದಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಯ ದಿನದಿಂದ ಈ ದಾವೆ ಹೂಡುವ ಕಾಲಕ್ಕೆ 22 ವರ್ಷಗಳಾಗಿರುವ ಕಾರಣ ಕಾಲಮಿತಿ ವ್ಯಾಪ್ತಿಯಲ್ಲಿ ಈ ದಾವೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಕಬ್ಜಾ ಇರುವುದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಇಂದಿಗೂ ಸಹ ತಾನೇ ದಾವಾ ಆಸ್ತಿಯ ಕಬ್ಜಾ ಇರುವುದಾಗಿ ನುಡಿಯುತ್ತಾರೆ. ನನ್ನ ತಾಯಿಗೆ

ಇನ್ನೂ ಇಬ್ಬರೂ ವಾರಸುದಾರರು ಇದ್ದರೂ ಸಹ ನಾನು ಒಬ್ಬಳೇ ವಾರಸುದಾರಳು ಎಂದು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.